ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜು
College Code : SU 278
ಗಣಿತ್ ನಗರ, ಕುಕ್ಕುಂದೂರು, ಕಾರ್ಕಳ
(ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್‌ನ ಆಡಳಿತಕ್ಕೊಳಪಟ್ಟಿದೆ.)
ಸಂಚಿಕೆ –18

KNOWLEDGE RESEARCH VALUES


# ಜ್ಞಾನಸುಧಾ ಪತ್ರಿಕೆ

ಸಂತೃಪ್ತ ಸಮಾಜ ನಿರ್ಮಾಣದ ಕನಸುಗಳೊಂದಿಗೆ ........


*For internal Circulation only*



"ಗೋಪಜ್ಜ"ನಿಗೊಂದು ನುಡಿನಮನ 01
ಜ್ಞಾನಸುಧಾ'ದಲ್ಲಿ ವಾರ್ಷಿಕ ಕ್ರೀಡಾಕೂಟ ಉದ್ಘಾಟನೆ 01
ಜ್ಞಾನಸುಧಾದಲ್ಲಿ ಬಾಸ್ಕೆಟ್ ಬಾಲ್ ಅಂಗಣ ಉದ್ಘಾಟನೆ 01
"ವಿದ್ಯಾರ್ಥಿಗಳು ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಿ" –ಶ್ರೀ ರಾಯಪ್ಪ 01
'ಬಳ್ಳಾರಿ ಜ್ಞಾನಸುಧಾ'ದ ಶಂಕುಸ್ಥಾಪನೆ 02
ಕಾರ್ಕಳ ಜ್ಞಾನಸುಧಾದಲ್ಲಿ ಸಂಸ್ಥಾಪಕರ ದಿನಾಚರಣೆ 02
ಸಂಪಾದಕೀಯ 02
ಜ್ಞಾನಸುಧಾದಲ್ಲಿ ರಸಾಯನ ಶಾಸ್ತ್ರ ಕಾರ್ಯಗಾರ 02
ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಅರಿವು 03
S.S.T.H SAHYADRI SCIENCE TALENT HUNT 03
High School Articles 04
PUC Articles 05-06
ಎನ್.ಎಸ್.ಎಸ್. ವಾರ್ಷಿಕ ವಿಶೇಷ ಶಿಬಿರ 2016 07
SPORTS ACHIEVEMENTS - 2016 07
ಜ್ಞಾನ ಸುಧಾ ಶಿಕ್ಷಕರದಿನಾಚರಣೆ 08
ಜ್ಞಾನಸುಧಾ ಟ್ರೈನಿಂಗ್ ಅಕಾಡೆಮಿ ಶೀಘ್ರದಲ್ಲಿ ಶುಭಾರಂಭ 08


## "ಗೋಪಜ್ಜ" ನಿಗೊಂದು ನುಡಿನಮನ



ಅಂದು ನವಂಬರ್ ಹನ್ನೆರಡು. ಬೆಳಗ್ಗೆ ಹತ್ತೂವರೆಯ ಸಮಯ. "ಜ್ಞಾನಸುಧಾ"ದ ಆವರಣದಲ್ಲಿ ಗಾಳಿ, ನೀರು, ಮಣ್ಣು, ಎಲ್ಲವೂ ಒಮ್ಮೆಲೇ ಸ್ತಬ್ಧವಾದಂತೆ ಅನಿಸಿತು. ಏಕೆಂದರೆ ಅದಕ್ಕೆ ಪ್ರೀತಿಯ ಧಾರೆಯೆರೆಯುತ್ತಿದ್ದ "ಗೋಪಜ್ಜ" (ಅಜೆಕಾರು ಪದ್ಮಗೋಪಾಲ್ ಎಜುಕೇಷನ್ ಟ್ರಸ್ಟ್‌ನ ಸ್ಥಾಪಕರಾದ ಶ್ರೀ ಗೋಪ ಶೆಟ್ಟಿ) ಇನ್ನಿಲ್ಲ ಎನ್ನುವ ಸುದ್ದಿ ಬರಸಿಡಿಲಿನಂತೆ ಅಪ್ಪಳಿಸಿತು. ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವ ಈ ಟ್ರಸ್ಟ್‌ಗೆ ಆತ್ಮದಂತೆ ಇದ್ದ ಈ ಮಹಾನ್ ಚೇತನ ಯಾರಿಗೂ ನೋವು ಕೊಡದಂತೆ ನಗುನಗುತ್ತಾ ಕ್ಷಣಾರ್ಧದಲ್ಲಿ ತನ್ನ ಇಹಲೋಕದ ಯಾತ್ರೆಯನ್ನು ಮುಗಿಸಿದ್ದಾರೆ, ಎಂದರೆ ಯಾರೂ ನಂಬಲೂ ಸಿದ್ಧವಿರಲಿಲ್ಲ.

ತೊಂಭತ್ತಾರರ ಹರೆಯದಲ್ಲಿದ್ದರೂ ಸಾವಿನ ಬಗ್ಗೆ ಹೆದರದೆ, ತನ್ನ ಸುತ್ತಲಿರುವ ಪ್ರತಿಯೊಬ್ಬರಲ್ಲೂ ಜೀವನ ಸ್ಫೂರ್ತಿ, ಜೀವನ ಪ್ರೀತಿ ತುಂಬುತ್ತಾ, ಸದಾ ಕ್ರಿಯಾಶೀಲರಾಗಿ ಇರುತ್ತಿದ್ದ ಆ ಹಿರಿಯ ಜೀವ ತನ್ನ ಮಗ ಡಾ. ಸುಧಾಕರ ಶೆಟ್ಟಿಯವರು ಕಟ್ಟಿ ಬೆಳೆಸುತ್ತಿರುವ ಸಂಸ್ಥೆಗಳ ಬಗ್ಗೆ ಹೆಮ್ಮೆ, ಗೌರವ ಹೊಂದಿದವರು. ಸಂಸ್ಥೆಯ ಪ್ರತಿಯೊಂದೂ ಕಾರ್ಯಕ್ರಮಕ್ಕೂ ತಪ್ಪದೆ ಆಗಮಿಸಿ ನಗುನಗುತ್ತಾ ಪ್ರತಿಯೊಬ್ಬರನ್ನೂ ಬೆನ್ನು ತಟ್ಟಿ ಮಾತನಾಡಿಸುತ್ತಿದ್ದವರು. ಸಂಸ್ಥೆಯ ವಿದ್ಯಾರ್ಥಿಗಳು ಎತ್ತರದ ಸಾಧನೆ ಮಾಡಿದಾಗಲೆಲ್ಲಾ ತನ್ನ ಬೊಚ್ಚುಬಾಯಿ ಅಗಲಿಸಿ ಮಗುವಿನಂತಹ ಮುಗ್ಧ ನಗು ನಗುತ್ತಾ ವಿದ್ಯಾರ್ಥಿಗಳಲ್ಲಿ ಇನ್ನಷ್ಟು ಸ್ಫೂರ್ತಿ ತುಂಬಿದವರು. ಮಕ್ಕಳ ಪ್ರೀತಿಯ "ಗೋಪಜ್ಜ" ನೀವು ಅಗಲಿದರೂ ನಿಮ್ಮ ಚೈತನ್ಯ ನಮಗೆ ದಾರಿದೀಪ. ಜ್ಞಾನಸುಧಾದ ಮಣ್ಣಿನಲ್ಲಿ ನೀವು ಇನ್ನೊಮ್ಮೆ ಹುಟ್ಟಿ ಬನ್ನಿ. ನಿಮ್ಮ ನೆನಪು ನಮ್ಮೊಳಗೆ ಸದಾ ಹಚ್ಚ ಹಸಿರು. ಇದು ಜ್ಞಾನಸುಧಾ ಬಳಗ ನಿಮಗೆ ಅರ್ಪಿಸುತ್ತಿರುವ ನುಡಿನಮನ.

## 'ಜ್ಞಾನಸುಧಾ'ದಲ್ಲಿ ವಾರ್ಷಿಕ ಕ್ರೀಡಾಕೂಟ ಉದ್ಘಾಟನೆ



ವಿದ್ಯಾರ್ಥಿಗಳಿಗೆ ಇಂದು ಕೇವಲ ತರಗತಿಯೊಳಗಿನ ಕಲಿಕೆ, ಅಂಕಗಳು ಸಾಲುವುದಿಲ್ಲ. ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ವಿದ್ಯಾರ್ಥಿಗಳು ಪ್ರಾಶಸ್ತ್ಯವನ್ನು ನೀಡಬೇಕು. ಕ್ರೀಡಾಸಕ್ತಿಯನ್ನು ಬೆಳೆಸಿಕೊಂಡಾಗ ದೈಹಿಕ ಕ್ಷಮತೆ ಹೆಚ್ಚುತ್ತದೆ ಎಂದು ಉಡುಪಿ ಜಿಲ್ಲಾ ಬಾಸ್ಕೆಟ್ ಬಾಲ್ ಅಸೋಸಿಯೇಶನ್ ಉಪಾಧ್ಯಕ್ಷರು ಹಾಗೂ ಜಯದೇವ ಮೋಟಾರ್ಸ್ ಇದರ ಪ್ರವರ್ತಕರೂ ಆದಂತಹ ಶ್ರೀ ಜಯರಾಮ ಸುವರ್ಣ ಇವರು ಅಭಿಪ್ರಾಯಪಟ್ಟರು. ಇವರು ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ವಾರ್ಷಿಕ ಕ್ರೀಡಾಕೂಟದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡುತ್ತಿದ್ದರು.

ಈ ಕ್ರೀಡಾಕೂಟದಲ್ಲಿ ಭಾಗವಹಿಸಲು ಹೆಮ್ಮೆಯಾಗುತ್ತಿದೆ. ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳಿಗೆ, ಅವುಗಳೇ ಸಾಟಿಯನ್ನುವಷ್ಟರ ಮಟ್ಟಿಗೆ ಸಂಸ್ಥೆ ಬೆಳೆಯಲಿ. ಇಲ್ಲಿಯ ವಿದ್ಯಾರ್ಥಿಗಳು ಎಲ್ಲರಿಗೂ ಮಾದರಿಯಾಗಲಿ ಎಂದು ಕ್ರೀಡಾಕೂಟವನ್ನು ಉದ್ಘಾಟಿಸಿದ ಉಡುಪಿ ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಕ್ರೀಡಾ ಸಂಘಟಕರಾದ ಶ್ರೀ ಶ್ರೀಧರ ಶೆಟ್ಟಿ ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮವನ್ನು ಪಥಸಂಚಲನದ ಮೂಲಕ ಆರಂಭಿಸಲಾಯಿತು ಸಂಸ್ಥೆಯ ಒಂದು ಸಾವಿರದ ಇಪ್ಪತ್ತೈದು ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದರು. ನಂತರ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಸಂಸ್ಥೆಯನ್ನು ಪ್ರತಿನಿಧಿಸಿದ ವಿದ್ಯಾರ್ಥಿಗಳು ಕ್ರೀಡಾಜ್ಯೋತಿಯನ್ನು ಹೊತ್ತು ತಂದರು. ಅತಿಥಿಗಳು ಕ್ರೀಡಾ ಕುಂಡದಲ್ಲಿ ಜ್ಯೋತಿಯನ್ನು ಬೆಳಗಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ ಕೊಡವೂರು ವಹಿಸಿದ್ದರು. ಆಡಳಿತ ಮಂಡಳಿಯ ಸದಸ್ಯ ಶ್ರೀ ಶಾಂತಿರಾಜ್ ಜೈನ್, ಪ್ರೌಢಶಾಲಾ ವಿಭಾಗದ ಪ್ರಾಂಶುಪಾಲೆ ಶ್ರೀಮತಿ ಉಷಾರಾವ್ ಯು ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಉಪಪ್ರಾಂಶುಪಾಲರಾದ ಶ್ರೀ ಸಾಹಿತ್ಯ ಸ್ವಾಗತಿಸಿದರು. ಉಪನ್ಯಾಸಕರಾದ ಶ್ರೀ ಪ್ರಜ್ವಲ್ ಕುಲಾಲ್ ಕಾರ್ಯಕ್ರಮ ನಿರ್ವಹಿಸಿದರು.

## "ಜ್ಞಾನಸುಧಾದಲ್ಲಿ ಒಂಭತ್ತು ಲಕ್ಷವೆಚ್ಚದಲ್ಲಿ ಬಾಸ್ಕೆಟ್ ಬಾಲ್ ಅಂಗಣ ಉದ್ಘಾಟನೆ"

ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಯಲ್ಲಿ ಕ್ರೀಡಾಸಕ್ತರಿಗಾಗಿ ಒಂಭತ್ತು ಲಕ್ಷ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತವಾಗಿ ನಿರ್ಮಿಸಿರುವ ಬಾಸ್ಕೆಟ್ ಬಾಲ್ ಅಂಗಣವನ್ನು ಉಡುಪಿ ಜಿಲ್ಲಾ ಬಾಸ್ಕೆಟ್ ಬಾಲ್ ಅಸೋಸಿಯೇಶನ್‌ನ ಉಪಾಧ್ಯಾಕ್ಷರಾದ ಶ್ರೀಯುತ ಜಯರಾಮ್ ಸುವರ್ಣ ಇವರು ಗೋಲು ಹೊಡೆಯುವ ಮೂಲಕ ವಿದ್ಯುಕ್ತವಾಗಿ ಉದ್ಘಾಟಿಸಿದರು.

ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್ (ರಿ) ನ ವಿಶ್ವಸ್ಥ ಮಂಡಳಿಯ ಸದಸ್ಯರಾದ ಶ್ರೀ ಕರುಣಾಕರ ಶೆಟ್ಟಿ, ಉಡುಪಿ ಜಿಲ್ಲಾ ಕ್ರೀಡಾ ಸಮನ್ವಯಾಧಿಕಾರಿ ಶ್ರೀ ಶ್ರೀಧರ್ ಶೆಟ್ಟಿ, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ ಕೊಡವೂರು, ಪ್ರೌಢಶಾಲಾ ವಿಭಾಗದ ಪ್ರಾಂಶುಪಾಲರಾದ ಶ್ರೀಮತಿ ಉಷಾ ರಾವ್ ಯು, ವಿಶ್ವಸ್ಥ ಮಂಡಳಿಯ ಸದಸ್ಯರಾದ ಶ್ರೀ ಅನಿಲ್ ಕುಮಾರ್ ಜೈನ್, ಶ್ರೀ ಶಾಂತಿರಾಜ್ ಹೆಗ್ಡೆ, ನಿಟ್ಟೆ ವಿದ್ಯಾಸಂಸ್ಥೆಯ ಬಾಸ್ಕಟ್ ಬಾಲ್ ತರಬೇತುದಾರ ಶ್ರೀ ಹುಸೇನ್, ಉಪಪ್ರಾಂಶುಪಾಲರಾದ ಶ್ರೀ ಸಾಹಿತ್ಯ, ಸಾರ್ವಜನಿಕ ಸಂಪರ್ಕಾಧಿಕಾರಿ ಶ್ರೀಮತಿ ಜ್ಯೋತಿ ಪದ್ಮನಾಭ ಭಂಡಿ ಉಪಸ್ಥಿತರಿದ್ದರು. ಉದ್ಘಾಟನೆಯ ಬಳಿಕ ಕಾಲೇಜು ವಿದ್ಯಾರ್ಥಿಗಳಿಂದ ಬಾಸ್ಕೆಟ್ ಬಾಲ್ ಪಂದ್ಯಾಟ ನಡೆಯಿತು.



## "ವಿದ್ಯಾರ್ಥಿಗಳು ಪರಿಸರ ಪ್ರಜ್ಞೆ ಬೆಳೆಸಿಕೊಳ್ಳಿ"-ಶ್ರೀ ರಾಯಪ್ಪ



"ನಮ್ಮ ದೇಶವನ್ನು ಸ್ವಚ್ಛವಾಗಿ ಇಡಬೇಕಾದರೆ ನಮ್ಮ ಮನೆ, ಮಠಗಳು, ಪರಿಸರವನ್ನು ಸ್ವಚ್ಛವಾಗಿ ಇರಿಸಬೇಕು. ದಯವಿಟ್ಟು ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಿ" ಎಂದು ಕಾಪು ಪುರಸಭೆಯ ಮುಖ್ಯಾಧಿಕಾರಿ ಶ್ರೀ ರಾಯಪ್ಪ ಅವರು ಕರೆಯಿತ್ತರು. ಅವರು ನವೆಂಬರ್ ಹದಿನಾಲ್ಕರಂದು ನಡೆದ ಕ್ರೀಡೋತ್ಸವದ ಸಮಾರೋಪ ಸಮಾರಂಭದಲ್ಲಿ "ಜ್ಞಾನಸುಧಾ ಬಳಗ" ನೀಡಿದ ಸನ್ಮಾನವನ್ನು ಸ್ವೀಕರಿಸಿ ಮಾತನಾಡುತ್ತಿದ್ದರು. ಅಧ್ಯಕ್ಷತೆ ವಹಿಸಿ ಮಾತನಾಡಿದ ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ವಿಶ್ವಸ್ತ ಮಂಡಳಿಯ ಸದಸ್ಯರಾದ ಶ್ರೀಕರುಣಾಕರ ಶೆಟ್ಟಿಯವರು "ಈಗಾಗಲೇ ಒಂಭತ್ತು ಲಕ್ಷವೆಚ್ಚದಲ್ಲಿ ಬಾಸ್ಕೆಟ್ ಬಾಲ್ ಅಂಗಣ ನಿರ್ಮಾಣವಾಗಿದೆ. ಇದರ ಜೊತೆಗೆ ಕ್ರೀಡೆಗೆ ಇನ್ನಷ್ಟು ಪ್ರೋತ್ಸಾಹ ನೀಡಲು ಇತರ ಸೌಲಭ್ಯಗಳನ್ನು ಒದಗಿಸಲಿದ್ದೇವೆ" ಎಂದರು.

ಈ ಸಂದರ್ಭದಲ್ಲಿ ಕಾರ್ಕಳ ಪುರಸಭೆಯ ಇಪ್ಪತ್ತಾರು ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಡಾ. ಸುಧಾಕರ ಶೆಟ್ಟಿ ಅವರು ಮಾತನಾಡಿ, "ನಗರವನ್ನು ಸ್ವಚ್ಛವಾಗಿಸುವುದು ಪುಣ್ಯದ ಕೆಲಸ: ಪೌರಕಾರ್ಮಿಕರ ಸೇವೆ ಶ್ಲಾಘನೀಯವೆಂದರು. ಪೌರಕಾರ್ಮಿಕರ ಪರವಾಗಿ ಶ್ರೀ ಸಂಜೀವ ಅವರು ಮಾತನಾಡಿದರು.

ಜ್ಞಾನಸುಧಾ ಪಿ.ಯು.ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ ಕೊಡವೂರು ಸ್ವಾಗತಿಸಿದರು. ದೈಹಿಕ ಶಿಕ್ಷಕರಾದ ಶ್ರೀ ಅರುಣ್ ಕುಮಾರ್ ವಂದಿಸಿದರು. ಶ್ರೀಮತಿ ಸಂಗೀತ ಕುಲಾಲ್ ಕಾರ್ಯಕ್ರಮ ನಿರ್ವಹಿಸಿದರು.

## ಸಂಪಾದಕೀಯ

ಪ್ರಿಯ ಓದುಗ,

ದೇಶವಿಂದು ಕ್ರಾಂತಿಕಾರಕ ಹೆಜ್ಜೆಯನ್ನು ಹಾಕುತ್ತಿದೆ. ಇಡೀ ದೇಶವೇ ತಲೆತಗ್ಗಿಸುವಂತಹ ಕೆಲಸ ಮಾಡುತ್ತಿದ್ದವರನ್ನೆಲ್ಲಾ ತಲೆಯೆತ್ತದಂತೆ ಮಾಡುತ್ತಿದೆ ನಮ್ಮ ಸರಕಾರ. ದುಡಿಯುವವನಿಗೆ ಇಂದು ಬೆಲೆ ಬರುತ್ತಿದೆ.

ಐನೂರು ಹಾಗೂ ಸಾವಿರ ಮುಖ ಬೆಲೆಯ ನೋಟುಗಳು ಬೆಲೆ ಕಳೆದುಕೊಳ್ಳುವುದರೊಂದಿಗೆ ಕಾಳಸಂತೆ ವ್ಯವಹಾರಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಇದರೊಂದಿಗೆ ನಮ್ಮ ಜ್ಞಾನಸುಧಾ ಕಂಡ "ಮೌಲ್ಯಗಳೊಂದಿಗೆ ಬದುಕು" ಎನ್ನುವ ಕನಸು ಸಾಕಾರಗೊಳ್ಳುತ್ತಿದೆ ಅವಿದ್ಯಾವಂತರಿಗಿಂತ ಹೆಚ್ಚು.

ಇಂದು ದೇಶಕ್ಕೆ ವಿದ್ಯಾವಂತರೆನಿಸಿಕೊಂಡವರೇ ಹೊರೆಯಾಗುತ್ತಿದ್ದಾರೆ. ವಿದ್ಯೆ ಎನ್ನುವುದು ಇಂದು ಮೌಲ್ಯಗಳೊಂದಿಗೆ ಸಾಗುತ್ತಿಲ್ಲ. ಹೆಚ್ಚಿನ ವಿದ್ಯಾವಂತರಿಗೆ ಇಂದು ದೇಶದ ಬಗ್ಗೆ ಗೌರವವಿಲ್ಲ. ಕುರುಡು ಕಾಂಚಾಣ ನಮ್ಮನ್ನೆಲ್ಲಾ ಎಷ್ಟೊಂದು ಮರಳು ಮಾಡಿದೆ ಎಂದರೆ ನಮ್ಮಲ್ಲಿ ಹೆಚ್ಚಿನವರಿಗೆ 'ಹೆತ್ತ ತಂದೆ ತಾಯಿ, ಹೊತ್ತ ಭೂಮಿಯ ಪರಿವೇ ಇಲ್ಲ. ಏನೇ ಆಗಲಿ ಆಗುತ್ತಿರುವುದೆಲ್ಲಾ ಒಳ್ಳೆಯದಕ್ಕೆ ಎಂದು ತಿಳಿದುಕೊಳ್ಳೋಣ.

ಮೌಲ್ಯಯುತ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುವ 'ಜ್ಞಾನಸುಧಾ' ಬಳಗ ಸಂಸ್ಥಾಪಕರ ದಿನಾಚರಣೆಯ ಸುಸಂದರ್ಭದಲ್ಲಿ ಸಂಸ್ಥೆಯ ಪ್ರತಿಭಾವಂತರನ್ನು ಪುರಸ್ಕರಿಸುವ ಸಂದರ್ಭದಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಂಡಿತು. ಕೆ.ಸಿ.ಇ.ಟಿ.ಮೆಡಿಕಲ್ ಪರೀಕ್ಷೆಯ ಮೂಲಕ ಉಚಿತ ಎಂ.ಬಿ.ಬಿ.ಎಸ್ ಸೀಟು ದೊರಕಿಸಿಕೊಂಡ ಹದಿಮೂರು ಜನ ವಿದ್ಯಾರ್ಥಿಗಳಿಂದ, ತಾವು ಹೆತ್ತ ತಂದೆ-ತಾಯಿ, ಹಾಗೂ ವಿದ್ಯೆ ಕೊಟ್ಟ ಈ ಸಮಾಜಕ್ಕೆ ತಮ್ಮಿಂದಾದ ಸೇವೆಯನ್ನು ಸಲ್ಲಿಸಲು ಬದ್ಧರಾಗಿರುವುದಾಗಿ ಪ್ರಮಾಣವಚನವನ್ನು ಸ್ವೀಕರಿಸಿತು. ಇದು ದೇಶ ಸೇವೆಯ ನಿಟ್ಟಿನಲ್ಲಿ "ಜ್ಞಾನ ಸುಧಾ ಇಡುತ್ತಿರುವ ಪುಟ್ಟ ಹೆಜ್ಜೆ.

ಹಾಗೆಯೇ ಅಕ್ಟೋಬರ್ 2ರ ಗಾಂಧೀಜಯಂತಿ ಸುಸಂದರ್ಭದಲ್ಲಿ ಆದಿತ್ಯವಾರದ ರಜೆಯನ್ನೂ ಪರಿಗಣಿಸದೆ ಜ್ಞಾನಸುಧಾ ಬಳಗ 'ಸ್ವಚ್ಛ ಭಾರತ' ಆಂದೋಲನದಲ್ಲಿ ಭಾಗವಹಿಸಿದ್ದಲ್ಲದೇ, ಸರಕಾರಿ ಆಸ್ಪತ್ರೆಯ ರೋಗಿಗಳನ್ನು ಭೇಟಿಯಾಗಿ ಅವರ ದುಃಖದಲ್ಲಿ ಭಾಗಿಗಳಾದದ್ದು ಶ್ಲಾಘನೀಯ. 'ಜ್ಞಾನಸುಧಾ'ದ ಈ ಪುಟ್ಟ ಹೆಜ್ಜೆಗಳು ಸಮಾಜದಲ್ಲಿ ಸಂಚಲನ ಮೂಡಿಸಲಿ. ಸುದೃಢ ಸಮಾಜ, ಬಲಿಷ್ಟ ರಾಷ್ಟ್ರದ ಕನಸು ಆದಷ್ಟು ಬೇಗ ನನಸಾಗಲಿ ಎಂಬ ಹಾರೈಕೆಯೊಂದಿಗೆ,

-ಇತೀ ಸಂಪಾದಕೀಯ

## 'ಬಳ್ಳಾರಿ ಜ್ಞಾನಸುಧಾ'ದ ಶಂಕುಸ್ಥಾಪನೆ




ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್ ಹಾಗೂ ಜ್ಞಾನಮೃತ ಎಜ್ಯುಕೇಶನ್ ಟ್ರಸ್ಟ್ ಎಲ್ಎಲ್‌ಪಿ ಬಳ್ಳಾರಿ ಇದರ ವತಿಯಿಂದ ಸ್ಥಾಪನೆಗೊಳ್ಳಲಿರುವ ಉದ್ದೇಶಿತ ಬಳ್ಳಾರಿ ಜ್ಞಾನಸುಧಾ ಪಿ.ಯು ಕಾಲೇಜಿನ ಶಂಕು ಸ್ಥಾಪನೆಯನ್ನು ಇಂದು ಬಳ್ಳಾರಿಯಲ್ಲಿ ನೆರವೇರಿಸಲಾಯಿತು.ಶ್ರೀ ಬಸವರಾಜ್ ಹಾಗೂ ಮರ್ಚೆಡ್ ಬಸವನ ಗೌಡ್ ಇವರ ಉಪಸ್ಥಿತಿಯಲ್ಲಿ ಭೂಮಿ ಪೂಜೆಯ ಕಾರ್ಯಕ್ರಮ ನೆರವೇರಿದ ನಂತರ ಸಭಾ ಕಾರ್ಯಕ್ರಮ ಜರಗಿತು. ಅಜೆಕಾರ್ ಪದ್ಮಗೋಪಾಲ್ ಎಜುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿಯವರು ಪ್ರಾಸ್ತಾವಿಕವಾಗಿ ಮಾತನಾಡಿ ಎಲ್ಲರನ್ನೂ ಸ್ವಾಗತಿಸಿದರು. 'ಸಾಮಾನ್ಯ ವಿದ್ಯಾರ್ಥಿಯನ್ನೂ ಸಹ ಸಮಾಜದ ಮೇಲುಸ್ಥರಕ್ಕೆ ತರುವುದು ತಮ್ಮ ಕನಸು' ಎಂದರು. ಶಂಕು ಸ್ಥಾಪನೆಯನ್ನು ನೆರವೇರಿಸಿದ ಅತಿಥಿಗಳಾದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ.ಟಿ.ತಿಮ್ಮರಾಯಪ್ಪ, ಚಾರ್ಟೆಡ್ ಅಕೌಂಟೆಂಟ್ ಶ್ರೀ ಎಸ್.ಪನ್ನರಾಜ್ ಹಾಗೂ ಆಂಗ್ಲಭಾಷಾ ಪ್ರಾಧ್ಯಾಪಕರಾದ ಶ್ರೀ ಸತ್ಯನಾರಾಯಣ ರಾವ್ ಸಮಯೋಚಿತವಾಗಿ ಮಾತನಾಡಿದರು.ಅಧ್ಯಕ್ಷತೆ ವಹಿಸಿದ್ದ ಶ್ರೀ ಮರ್ಚಾಡ್ ಬಸವನ ಗೌಡ್ ಅವರು ಶುಭಾಸಂಶನೆಗೈದರು. ಜ್ಞಾನಾಮೃತ ವಿದ್ಯಾ ಸಂಸ್ಥೆ ಎಲ್ಎಲ್‌ಪಿ ಯ ಅಧ್ಯಕ್ಷರಾದ ಎನ್ಐಟಿಕೆ ಸುರತ್ಕಲ್ ಇದರ ಹಳೆ ವಿದ್ಯಾರ್ಥಿಯಾಗಿರುವ ಶ್ರೀ.ಎಂ.ಜಿ ಗೌಡ್ ಇವರು ಉಪಸ್ಥಿತರಿದ್ದರು. ಕಾಲೇಜಿನ ನಿಯೋಜಿತ ಪ್ರಾಂಶುಪಾಲ ಶ್ರೀ ಗಣೇಶ್ ಶೆಟ್ಟಿ ವಂದಿಸಿದರು. ಶ್ರೀ ವಿನೋದ್ ಕಾರ್ಯಕ್ರಮ ನಿರೂಪಿಸಿದರು.

## ಗಣಿತನಗರದ ಶ್ರೀ ಮಹಾಗಣಪತಿ ಭಜನಾಮಂಡಳಿ ಉದ್ಘಾಟನೆ



ಕಾರ್ಕಳ ಅ. 19 "ಮನೆಯಲ್ಲಿ ಭಜನಾ ಕಾರ್ಯಕ್ರಮಗಳನ್ನು ಮಾಡುವುದರಿಂದ ಕುಟುಂಬದ ವಿಭಜನೆಯನ್ನು ತಡೆಯಬಹುದು. ಭಜನಾ ಕಾರ್ಯಕ್ರಮಗಳಿಂದ ಸಮಾಜದಲ್ಲಿ ಶಾಂತಿ ನೆಲೆಸಿ, ಮೌಲ್ಯ ವೃದ್ಧಿಸುತ್ತದೆ." ಎಂದು ಕಾರ್ಕಳ ಕ್ಷೇತ್ರದ ಶಾಸಕರಾದ ಶ್ರೀ ವಿ.ಸುನಿಲ್ ಕುಮಾರ್ ಅವರು ಅಭಿಪ್ರಾಯ ವ್ಯಕ್ತಪಡಿಸಿದರು. ಅವರು ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿ ಗಣಿತನಗರ ಶ್ರೀ ಮಹಾಗಣಪತಿ ಭಜನಾ ಮಂಡಳಿಯನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಕಮಲಾಕ್ಷ ನಾಯಕ್ ಶಾಂತೇರಿ ಅವರು ತಮ್ಮ ತಂಡದವರೊಂದಿಗೆ ಭಜನಾಕಾರ್ಯಕ್ರಮವನ್ನು ನೆರವೇರಿಸಿದರು. ಅಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ನ ಅಧ್ಯಕ್ಷರಾದ ಡಾ.ಸುಧಾಕರಶೆಟ್ಟಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿ 'ಜ್ಞಾನ, ಸಂಶೋಧನೆ, ಮೌಲ್ಯಗಳೊಂದಿಗೆ ಸಾಗುವ ತನ್ನ ಕನಸು "ಜ್ಞಾನಸುಧಾ"ದ ಮೂಲಕ ನನಸಾಗಿದೆ' ಎಂದರು. ಕಾರ್ಯಕ್ರಮದ ಸಂದರ್ಭದಲ್ಲಿ ಭಜನಾ ತಂಡದ ಸದಸ್ಯರನ್ನು ಗುರುತಿಸಲಾಯಿತು. ಉಪನ್ಯಾಸಕರಾದ ಶ್ರೀ ಪ್ರಜ್ವಲ್ ಕುಲಾಲ್ ಅವರು ಸ್ವಾಗತಿಸಿ, ಉಪಪ್ರಾಂಶುಪಾಲರಾದ ಶ್ರೀ ಸಾಹಿತ್ಯ ಅವರು ವಂದಿಸಿದರು.

## ಕಾರ್ಕಳ ಜ್ಞಾನಸುಧಾದಲ್ಲಿ ಸಂಸ್ಥಾಪಕರ ದಿನಾಚರಣೆ ಚಿನ್ನ,ಬೆಳ್ಳಿ ಪದಕಗಳನ್ನು ಪಡೆದ ಹೆಮ್ಮೆಯ ಸಾಧಕರು




ಕಾರ್ಕಳ ಅ 3 : ಆಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಹಾಗೂ ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳ ಸ್ಥಾಪಕರ ದಿನಾಚರಣೆಯ ಅಂಗವಾಗಿ ದ್ವಿತೀಯ ಪಿ.ಯು.ಸಿ ಯಲ್ಲಿ ಶ್ರೇಷ್ಠ ಸಾಧನೆಗೈದ 29 ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಬೆಂಗಳೂರು ಮುನ್ಸಿಪಾಲ್ ಆಡಳಿತ ನಿರ್ದೇಶನಾಲಯದ ನಿರ್ದೇಶಕ ಡಾ.ವಿಶಾಲ್ ಆರ್ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. "ಜೀವನದ ಮುಖ್ಯ ಗುರಿ ನಾವು ಸಂತೋಷವಾಗಿರುವುದು. ನಾವುಏನು ಮಾಡಿದರೂ, ಏನನ್ನು ಸಾಧಿಸಿದರೂ ಕೊನೆಗೆ ಸಂತೋಷ ಸಿಗಬೇಕೆನ್ನುವ ಉದ್ದೇಶದಿಂದಲೇ ಮಾಡುತ್ತೇವೆ. ವೃತ್ತಿಜೀವನ ಸಾಮಾಜಿಕ ಜೀವನ ಇವೆಲ್ಲವನ್ನೂ ಸಮಾನವಾಗಿ ಸರಿದೂಗಿಸಿಕೊಂಡು ಸಂತೃಪ್ತವಾಗಿ ಬದುಕಬೇಕೆನನ್ನುವುದು ನಮ್ಮ ಮೊದಲ ಗುರಿಯಾಗಿರಬೇಕು" ಎಂದು ಅವರು ಹೇಳಿದರು.

ನಿಮಗೆ ಏನೆಲ್ಲಾ ಸಂಗತಿಗಳು ಖುಷಿಕೊಡುತ್ತವೋ ಆ ಸಂಗತಿಗಳತ್ತ ಮತ್ತಷ್ಟು ಗಮನಹರಿಸಿ, ಬರವಣಿಗೆ ಸಂಗೀತ,ಕಲೆ,ಹೀಗೆ ಖುಷಿ ಕೊಡುವ ಯಾವುದನ್ನೂ ಜೀವನದಲ್ಲಿ ಕಳೆದುಕೊಳ್ಳಬೇಡಿ,ಅದು ನಿಮ್ಮ ಬದುಕಿಗೆ ಸ್ಫೂರ್ತಿಕೊಡುತ್ತದೆ ಎಂದರು. ಉಡುಪಿ ಜಿಲ್ಲಾ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಆರ್.ಬಿ.ನಾಯಕ್ ಮಾತನಾಡಿ, ಈ ಸಂಸ್ಥೆಯಿಂದಾಗಿ ಪ್ರಸಕ್ತ ಸಾಲಿನಲ್ಲಿ ಉಡುಪಿ ಜಿಲ್ಲೆ ರಾಜ್ಯಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಗಿದೆ. ಈ ಶಿಕ್ಷಣಸಂಸ್ಥೆಯಿಂದ ಇನ್ನಷ್ಟು ಸಾಧನೆಗಳು ಹೊರಹೊಮ್ಮಲಿ ಎಂದರು. ಭಟ್ಕಳದ ಉಪ ಜಿಲ್ಲಾಧಿಕಾರಿ ಶ್ರೀ ಚಿದಾನಂದ ಕೆ.ಎ.ಎಸ್ ಅವರು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿಯ ಬಗ್ಗೆ ಮಾತನಾಡಿದರು. ಆಜೆಕಾರು ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿ ಸ್ವಾಗತಿಸಿದರು. ಸಂಸ್ಥಾಪಕರಾದ ಶ್ರೀ ಗೋಪಶೆಟ್ಟಿ ಅವರು ಉಪಸ್ಥಿತರಿದ್ದರು.

**ಈ ಕೆಳಗಿನ ಇಪ್ಪತ್ತೊಂಬತ್ತು ವಿದ್ಯಾರ್ಥಿಗಳನ್ನು ಚಿನ್ನ ಹಾಗೂ ರಜತ ಪದಕಗಳನ್ನು ನೀಡುವ ಮೂಲಕ ಸನ್ಮಾನಿಸಲಾಯಿತು.**

### ಚಿನ್ನದ ಪದಕ ಪಡೆದವರು

**1.ನೇಹಾ.ಡಿ.ಶೆಟ್ಟಿ** : ರಾಜ್ಯಮಟ್ಟದ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಮೂರನೇ ರ್‍ಯಾಂಕ್ ಹಾಗೂ ಜೆ.ಇ.ಇ.ಮೈನ್ ಪರೀಕ್ಷೆಯ ಮೂಲಕ ಎನ್.ಐ.ಟಿ.ಕೆ.ಗೆ ಪ್ರವೇಶ.

**2.ರಕ್ಷಾಶೆಣೈ** : ರಾಜ್ಯಮಟ್ಟದ ದ್ವಿತೀಯ ಪಿ.ಯು.ಸಿ ಪರೀಕ್ಷೆಯಲ್ಲಿ ಕಾಮರ್ಸ್ ವಿಭಾಗದಲ್ಲಿ ಎರಡನೇ ರ್‍ಯಾಂಕ್ ಹಾಗೂ ಸಿ.ಎ.ಸಿ.ಪಿ.ಟಿ.ಪರೀಕ್ಷೆಯಲ್ಲಿ ತೇರ್ಗಡೆ.

**3.ಅರ್ಜುನ್ ರಾವ್** : ಉಚಿತ ಮೆಡಿಕಲ್ ಸೀಟ್ ನೊಂದಿಗೆ ಬೆಂಗಳೂರು ಮೆಡಿಕಲ್ ಕಾಲೇಜಿಗೆ ಪ್ರವೇಶ .

### ರಜತ ಪದಕ ಪಡೆದವರು.

**ಕೆ.ಸಿ.ಇ.ಟಿ. ಮೆಡಿಕಲ್ ಮೂಲಕ ಉಚಿತ ಎಂ.ಬಿ.ಬಿ.ಎಸ್ ಸೀಟುಗಳಿಸಿದವರು**: ಶ್ರದ್ಧಾ ಎಸ್.ಭಟ್, ಶ್ಯಾಮರಾವ್ ರಾಜೇಂದ್ರ ಕುಲಕರ್ಣಿ, ಆಕಾಶ್ ಎಚ್ ನಾಯಕ್, ಶ್ರೀಕರಭಟ್, ಸುಹಾಸ್ ಎಚ್.ಎಸ್, ಪೂಜಾನಾಯಕ್, ಆಟಲ್.ಎಸ್.ಶೆಟ್ಟಿ, ಸುರಯ್ಯ ಅಂಜುಮ್, ಕಾರ್ತಿಕ್ ಆರ್.ಕಾರ್ಲ,ರಾಘವೇಂದ್ರ.

**ಜೆ.ಇ.ಇ.ಮೈನ್ ಮೂಲಕ ಎನ್.ಐ.ಟಿ.ಕೆ ಸುರತ್ಕಲ್ ಗೆ ಪ್ರವೇಶ ಪಡೆದವರು**: ತಿಲಕ್ ಎನ್.ಶೆಣೈ, ಮಹಿಮಾ ವರ್ಜಿನಿಯ ರೆಬೆಲ್ಲೊ, ನೇಹಾ ಡಿ.ಶೆಟ್ಟಿ, ಚಂದನ ಜಯರಾಮ್.

**ಕೆ.ಸಿ.ಇ.ಟಿ ಇಂಜಿನಿಯರಂಗ್ ವಿಭಾಗದಲ್ಲಿ 2000ದ ಒಳಗಿನ ರ್‍ಯಾಂಕ್ ಗಳಿಸಿದವರು**: ಪ್ರತೀಕ್ ಪ್ರಮೋದ್ ಮೂಡಲಗಿ, ಶರತ್ ಕುಮಾರ್,ಎಸ್.ರಾಹುಲ್ ಡಿ.ಶೆಟ್ಟಿ, ಸಂಪತ್ ನಾಯಕ್, ಮನೋಹರ ಪ್ರಭು.

**ಸಿ.ಎ.ಸಿ.ಪಿ.ಟಿ ಪರೀಕ್ಷೆಯಲ್ಲಿ ತೇರ್ಗಡೆಯಾದವರು** : ಪವನ್, ರಘರಾಮಪ್ರಭು,ಕೋಟ್ಯಾನ್ ಸಚಿನ್ ಸುಭಾಶ್, ಪ್ರಿಯಲ್ ಪಡಿವಾಳ್, ಜಿತೇಶ್ ಚೇತನ್, ವೈಷ್ಣವಿ.ಕೆ.ಮ್ಯೊಲಿ, ದೀಪ್ತಿ ಎಸ್., ರಕ್ಷತ್ ಆರ್. ಆಚಾರ್.

## ಗಾಂಧಿ ಜಯಂತಿಯನ್ನು ವಿಶಿಷ್ಟವಾಗಿ ಆಚರಿಸಿದ ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳು




ಕೈಯಲ್ಲಿ ಪೊರಕೆ, ಡಬ್ಬಗಳನ್ನು ಹಿಡಿದ ನೂರು ಮಂದಿ ವಿದ್ಯಾರ್ಥಿಗಳ ತಂಡ, ಸುಮಾರು ಇಪ್ಪತ್ತು ಜನ ಶಿಕ್ಷಕರು. ಇವರೆಲ್ಲರನ್ನು ಹುರಿದುಂಬಿಸುತ್ತಾ ನಡೆದ ಸಂಸ್ಥೆಯ ಅಧ್ಯಕ್ಷ ಡಾ. ಸುಧಾಕರ ಶೆಟ್ಟಿ ಸುಮಾರು ನಾಲ್ಕು ಗಂಟೆಗಳ ಕಾಲ ಏಳು ಕಿ. ಮೀ. ನಷ್ಟು ದೂರ ಸಾಗಿದ ಸ್ವಚ್ಛಭಾರತ ಆಂದೋಲನದಲ್ಲಿ ಭಾಗವಹಿಸಿದರು. ಲಾರಿಯಲ್ಲಿ ತುಂಬುವಷ್ಟು ಕಸವನ್ನು ರಸ್ತೆಯ ಇಕ್ಕೆಲಗಳಿಂದ ಸಂಗ್ರಹಿಸಿದ್ದು ಮಾತ್ರವಲ್ಲದೇ, ರಸ್ತೆಯ ಅಕ್ಕ ಪಕ್ಕದ ಅಂಗಡಿಗಳ ಮಾಲೀಕರಲ್ಲಿ ಕಸವನ್ನು ರಸ್ತೆಗೆ ಎಸೆಯದಂತೆ ವಿದ್ಯಾರ್ಥಿಗಳು ವಿನಂತಿಸಿಕೊಂಡರು. "ಸ್ವಚ್ಛ ಭಾರತದ ಕಡೆಗೆ ನಮ್ಮ ನಡಿಗೆ" ಗೆ ಊರಿನ ಹಲವಾರು ಗಣ್ಯರು ಸಹಕರಿಸಿದರು. ಗಣಿತನಗರದಿಂದ ಹೊರಟ ತಂಡವು ಕುಕ್ಕುಂದೂರು, ಅಯ್ಯಪ್ಪನಗರ, ಜೋಡುರಸ್ತೆ, ಬಂಗ್ಲೆಗುಡ್ಡೆ ಮಾರ್ಗವಾಗಿ ಕಾರ್ಕಳ ಬಂಡಿಮಠದವರೆಗೆ ಕಾಲ್ನಡಿಗೆಯಲ್ಲಿ ಸಾಗಿತು. ಡಾ. ಸುಧಾಕರ ಶೆಟ್ಟಿ ಮತ್ತು ತಂಡದೊಂದಿಗೆ ಸಂಸ್ಥೆಯ ಆಪ್ತರಾದ ಶ್ರೀ. ತ್ರಿವಿಕ್ರಮ ಕಿಣಿ ಹಾಗೂ ಶ್ರೀ. ದೇವೇಂದ್ರ ನಾಯಕ್ ಇವರು ಭಾಗವಹಿಸಿ ವಿದ್ಯಾರ್ಥಿಗಳನ್ನು ಹುರಿದುಂಬಿಸಿದರು.

ಅಂದು ಅಪರಾಹ್ನ ಸಂಸ್ಥೆಯ ಇಪ್ಪತ್ತೊಂದು ವಿದ್ಯಾರ್ಥಿಗಳ ತಂಡ ಕಾರ್ಕಳ ಸರಕಾರಿ ಆಸ್ಪತ್ರೆಗೆ ಭೇಟಿಕೊಟ್ಟಿತು. ಇಲ್ಲಿಯ ಒಳರೋಗಿಗಳಿಗೆ ಹಣ್ಣುಹಂಪಲು ವಿತರಿಸಿ ಅವರ ನೋವು, ದುಮ್ಮಾನಗಳನ್ನು ತಮ್ಮೊಂದಿಗೆ ಹಂಚಿಕೊಂಡರು.

## "ಜ್ಞಾನಸುಧಾ" ದಲ್ಲಿ ರಸಾಯನ ಶಾಸ್ತ್ರ ಕಾರ್ಯಗಾರ

**-ಸಮಯ ಪ್ರಜ್ಞೆ ಬೆಳೆಸಿಕೊಳ್ಳಿ** -ಡಾ.ಸುಧಾಕರ ಶೆಟ್ಟಿ



ಕೊನೆಯ ಸಾಲಿನಲ್ಲಿ ನಿಲ್ಲುವ ವಿದ್ಯಾರ್ಥಿಗೂ ಸಮಯ ಕೊಡಬೇಕಾದದ್ದು ಉಪನ್ಯಾಸಕರ ಕರ್ತವ್ಯ.ನಾವು ನಿರಂತರವಾಗಿ ಕಲಿಕೆಯಲ್ಲಿ ತೊಡಗಿಸಿಕೊಳ್ಳಬೇಕು. ಸಂಶೋಧನೆ ಮಾಡುವುದರ ಬಗ್ಗೆ ಯೋಚನೆ, ಯೋಜನೆಗಳನ್ನು ರೂಪಿಸಿಕೊಳ್ಳಬೇಕು ಎಂದು ಅಜೆಕಾರು ಪದ್ಮ ಗೋಪಾಲ್ ಎಜ್ಯುಕೇಶನ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿಯವರು ಹೇಳಿದರು.ಅವರು ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳು ಗಣಿತ ನಗರ ಇಲ್ಲಿ ನಡೆದ ರಸಾಯನ ಶಾಸ್ತ್ರ ಉಪನ್ಯಾಸಕರ ಒಂದು ದಿನದ ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀ ಆರ್.ಬಿ.ನಾಯಕ್ ಅವರು ಜಗತ್ತು ಬದಲಾದಂತೆ ಶಿಕ್ಷಣದ ಕ್ರಮವೂ ಬದಲಾಗುತ್ತಿದೆ. ನಮ್ಮ ವಿದ್ಯಾರ್ಥಿಗಳನ್ನು ರಾಷ್ಟ್ರಮಟ್ಟದ ಪರೀಕ್ಷೆಗಳಿಗೆ ತಯಾರು ಮಾಡುವುದು ನಮ್ಮ ಮುಂದಿರುವ ಸವಾಲಾಗಿದೆ ಎಂದರು. ವೇದಿಕೆಯಲ್ಲಿ ಉಡುಪಿ ಜಿಲ್ಲಾ ಪ.ಪೂ ಕಾಲೇಜುಗಳ ರಸಾಯನ ಶಾಸ್ತ್ರ ಉಪನ್ಯಾಸಕರ ಸಂಘದ ಅಧ್ಯಕ್ಷರಾದ ಶ್ರೀ ರಾಮ.ಎಚ್.ನಾಯಕ್, ಗೌರವಾಧ್ಯಕ್ಷರಾದ ಶ್ರೀ ಯು.ಎಲ್.ಭಟ್, ಸಂಸ್ಥೆಯ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ. ಕೊಡವೂರು, ವಿಷಯ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಬೆಂಗಳೂರಿನ ಶ್ರೀ ಎಸ್.ಲಕ್ಷ್ಮೀನಾರಾಯಣ ರಾವ್ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಈ ಸಾಲಿನಲ್ಲಿ ನಿವೃತ್ತಿ ಹೊಂದಿದ ಶ್ರೀ ಆರ್.ಎಸ್.ರೇವಣಕರ್ ಹಾಗೂ ಶ್ರೀ ನಾಗೇಶ್ ಶ್ಯಾನುಭಾಗ್ ಅವರನ್ನು ಸನ್ಮಾನಿಸಲಾಯಿತು. ಹಾಗೆಯೇ ಪಿ.ಹೆಚ್.ಡಿ ಪದವಿಯನ್ನು ಪಡೆದ ಡಾ.ವಿಶ್ವನಾಥ ಭಟ್, ಡಾ.ಶ್ರೀಕಾಂತ್ ಹಾಗೂ ಡಾ. ಪ್ರತಾಪ ಶೆಟ್ಟಿ ಇವರನ್ನು ಗೌರವಿಸಲಾಯಿತು.ಸಂಘದ ಕಾರ್ಯದರ್ಶಿ ಶ್ರೀಮತಿ ಸುಶೀಲ ಹೊಳ್ಳ ಇವರು ಸ್ವಾಗತಿಸಿದರು.ಸಂಘಟಕರಾದ ಶ್ರೀ ವಸಂತ ಆಚಾರ್ ವಂದಿಸಿದರು.ಶ್ರೀ ಪ್ರಜ್ವಲ್ ಕುಲಾಲ್ ಕಾರ್ಯಕ್ರಮ ನಿರ್ವಹಿಸಿದರು.

## ಜ್ಞಾನಸುಧಾ : ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಅರಿವು

### ಕಾರ್ಕಳ ಸಾಹಿತ್ಯ ಸಂಘ ಕಾರ್ಕಳ.




ಕಾರ್ಕಳ ಅ.6 : ಕಾರ್ಕಳ ಜ್ಞಾನಸುಧಾ ಪದವಿಪೂರ್ವ ಕಾಲೇಜು ಇಲ್ಲಿ, ಕಾರ್ಕಳ ಕನ್ನಡ ಸಾಹಿತ್ಯ ಸಂಘ ಕಾರ್ಕಳ ಇವರಿಂದ ವಿದ್ಯಾರ್ಥಿಗಳಿಗೆ ಸಾಹಿತ್ಯದ ಕುರಿತು ಅರಿವು-ಒಲವು ಮೂಡಿಸುವ ಕಾರ್ಯಕ್ರಮ ಇತ್ತೀಚೆಗೆ ಜರುಗಿತು.

ಕನ್ನಡ ಭಾಷೆಗೆ ತನ್ನದೇ ಆದ ಸಾಹಿತ್ಯ ಇದೆ. ಶಾಸ್ತ್ರೀಯ ಸ್ಥಾನಮಾನ ತಡವಾಗಿಯಾದರೂ ಸಿಕ್ಕಿರುವುದು ತುಂಬಾ ಹೆಮ್ಮೆಯ ಸಂಗತಿ. ನಮ್ಮ ಸಂಘವು ತಾಲೂಕಿನಲ್ಲಿ 19 ವರ್ಷಗಳನ್ನು ಕ್ರಿಯಾಶೀಲವಾಗಿ ಪೂರೈಸಿ ವಿಂಶತಿ ವರ್ಷಕ್ಕೆ ಬೆಳೆದುಬಂದಿದೆ. ಸಾಹಿತ್ಯವನ್ನು ಸಂಗೀತದ ಮೂಲಕ ತಿಳಿಸಿದಾಗ ಎಲ್ಲಾ ಜೀವಿಗಳು ತಲೆದೂಗುತ್ತವೆ ಎಂದು, ಕಾರ್ಕಳ ಸಾಹಿತ್ಯ ಸಂಘದ ಸಂಚಾಲಕರು, ಅಧ್ಯಕ್ಷರಾದ ಎಂ.ರಾಮಚಂದ್ರರವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದರು

ಮಾತಿನಲ್ಲಿ ಹೇಳಲಾಗದ ಭಾವನೆಯನ್ನು ಸಂಗೀತ ಹೇಳುತ್ತದೆ. ಸಂಗೀತದ ನಾದ ಲಯ, ರಿದಮ್ ಗಳು ಅದರ ಮೂಲದ್ರವ್ಯ ಎಂದು ಸಾಹಿತ್ಯದ ವಿವಿದ ಧ್ವನಿ, ಸ್ವರ, ಸ್ತರಗಳ ಬಗ್ಗೆ ಛಾಯಾಗ್ರಾಹಕ ಮತ್ತು ಸಂಗೀತ ಪ್ರೇಮಿಯಾದ ಶ್ರೀಯುತ ಈಶ್ವರಯ್ಯರವರು ಅರ್ಥಪೂರ್ಣ ಮಾಹಿತಿ ನೀಡಿದರು.

ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಸುಧಾಕರ ಶೆಟ್ಟಿ ಅತಿಥಿ ಅಭ್ಯಾಗತರನ್ನು ಫಲಪುಷ್ಪ, ಶಾಲು ಹೊದಿಸಿ ಗೌರವಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ದಿನೇಶ್ ಎಂ ಕೊಡವೂರು ಇವರು ವಹಿಸಿದ್ದರು. ರಾಗಧನ ಎಂಬ ಸಂಗೀತ ಸಂಸ್ಥೆಯ ಸ್ಥಾಪಕ, ಎಂ.ಜಿ.ಎಂ ಕಾಲೇಜಿನ ನಿವೃತ್ತ ಉಪನ್ಯಾಸಕ ಶ್ರೀ.ಅರವಿಂದ್ ಹೆಬ್ಬಾರ್, ಭುವನೇಂದ್ರ ಕಾಲೇಜಿನ ನಿವೃತ್ತ ಪಾಂಶುಪಾಲರಾದ ಪದ್ಮನಾಭ ಗೌಡ, ಕಾರ್ಕಳ ತಾಲೂಕು ಪಂಚಾಯತ್ ಅಧ್ಯಕ್ಷರಾದ ಕೆ.ಪಿ.ಶೆಣೈ, ನಮ್ಮ ಕಾಲೇಜಿನ ಸಾರ್ವಜನಿಕ ಸಂಪರ್ಕಾಧಿಕಾರಿ ಜ್ಯೋತಿ ಪದ್ಮನಾಭ್ ಭಂಡಿ ಉಪಸ್ಥಿತರಿದ್ದರು.

ಕುಮಾರಿ ಅರ್ಚನಾ ಉಪಾಧ್ಯಾಯ ಮತ್ತು ಸಮನ್ವಿತಾ ಇವರಿಂದ ಸಂಗೀತ ಕಾರ್ಯಕ್ರಮವಿತ್ತು. ಕನ್ನಡ ಉಪನ್ಯಾಸಕರಾದ ಪೂರ್ಣೇಶ್ ಕಾರ್ಯಕ್ರಮ ನಿರೂಪಿಸಿ, ಮಂಜುನಾಥ್ ಮುದ್ರಾಡಿ ವಂದಿಸಿದರು.

# S.S.T.H

## SAHYADRI SCIENCE TALENT HUNT



The main objective of this programme is to provide a platform for exhibiting new ideas and creative work of young talents of p.u.colleges , creating curiosity towards science and latest technology along with exchange in views and ideas with students of same age group and with technological experts

On the same grounds even Jnanasudha works , with the motive to inspire students towards advanced scientific methods

We toil to empower students with knowledge and enrich them with values so that seeds of research are sown.

Proceeding on this path , Sahyadri institute of technology is conducting this zonal competition under the aegis of Jnanasudha p.u.college since two years.

This year this programme was held in our college with cordial support of Dr Sudhakar shetty , president APGET and Mr.Dinesh .M.Kodavoor principal of jnanasudha p .u.college

Mrs Aysha Sabhana and Mrs Mary Jenci Associate professors in Mathematics of Sahyadri institutions inaugurated this programme. Mr Lozil Mendonca and Mr Abheesh jain were the Zonal coordinators. Mr Mithun .U lecturer in chemistry and Mr Mahadev Gowda HOD of physics department reviewed the projects The best 3 projects were selected for the state level competition

State level SSTH was held at Sahyadri campus on 12fth of November 2016. Jnanasudha bagged fourth place in the working model section .Following were the members of the team

Mr Saroop, Sanketh , Rahul and Ajith ( automated ration card system)

## ಶಿಕ್ಷಕ ಸಾಧಕರು



**ಶ್ರೀಮತಿ ಸಂಗೀತಾ**

ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ (ರಿ). ಉಡುಪಿ ಹಾಗೂ ಉಡುಪಿ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣಾ ಸಮಿತಿಯ ವತಿಯಿಂದ ದ್ವಿತೀಯ ಭಾಷೆ ಇಂಗ್ಲೀಷ್ ನಲ್ಲಿ ಸರಾಸರಿ ಅಂಕ ಗಳಿಕೆಯಲ್ಲಿ ಉಡುಪಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಹಿನ್ನೆಲೆಯಲ್ಲಿ ಶಿಕ್ಷಕರ ದಿನಾಚರಣೆಯಂದು "ಜಿಲ್ಲಾ ಸಾಧಕ ಪ್ರಶಸ್ತಿ" ಹಾಗೂ ಆದರ್ಶ ಆಸ್ಪತ್ರೆ ಉಡುಪಿ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ "ಉಡುಪಿ ಜಿಲ್ಲಾ ಮಟ್ಟದ ಆದರ್ಶ ಶಿಕ್ಷಕಿ ಪ್ರಶಸ್ತಿ"ಯನ್ನು ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢ ಶಾಲೆ ಗಣಿತನಗರ ಇಲ್ಲಿಯ ಆಂಗ್ಲಭಾಷಾ ಶಿಕ್ಷಕಿ ಶ್ರೀಮತಿ ಸಂಗೀತಾ ಇವರು ಪಡೆದಿರುತ್ತಾರೆ.



**ಕುಮಾರಿ ಪವಿತ್ರಾ**

ಜಿ. ಶಂಕರ್ ಫ್ಯಾಮಿಲಿ ಟ್ರಸ್ಟ್ (ರಿ). ಉಡುಪಿ ಹಾಗೂ ಉಡುಪಿ ಜಿಲ್ಲಾ ಮಟ್ಟದ ಶಿಕ್ಷಕರ ದಿನಾಚರಣಾ ಸಮಿತಿಯ ವತಿಯಿಂದ ದ್ವಿತೀಯ ಭಾಷೆ ಕನ್ನಡದಲ್ಲಿ ಸರಾಸರಿ ಅಂಕ ಗಳಿಕೆಯಲ್ಲಿ ಉಡುಪಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಹಿನ್ನೆಲೆಯಲ್ಲಿ ಶಿಕ್ಷಕರ ದಿನಾಚರಣೆಯಂದು "ಜಿಲ್ಲಾ ಸಾಧಕ ಪ್ರಶಸ್ತಿ" ಯನ್ನು ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢ ಶಾಲೆ ಗಣಿತನಗರ ಇಲ್ಲಿಯ ಕನ್ನಡಭಾಷಾ ಶಿಕ್ಷಕಿ ಕುಮಾರಿ ಪವಿತ್ರಾ ಇವರು ಪಡೆದಿರುತ್ತಾರೆ.




ಕರ್ನಾಟಕ ಸರಕಾರದ ಪದವಿ ಪೂರ್ವ ಶಿಕ್ಷಣ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನೆಯ ಮೈಸೂರು ವಿಭಾಗದ ಯೋಜನಾಧಿಕಾರಿ ಶ್ರೀ ಲಯನ್ ದಿನೇಶ್ ಸಿ. ಇವರು ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜು ಗಣಿತನಗರ ಇದರ ರಾಷ್ಟ್ರೀಯ ಸೇವಾ ಯೋಜನಾ ಘಟಕವನ್ನು ಸಂದರ್ಶಿಸಿ ವಿದ್ಯಾರ್ಥಿ ಸ್ವಯಂ ಸೇವಕರೊಂದಿಗೆ ಸಂವಾದ ನಡೆಸಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಳ್ವಾಸ್ ಪದವಿ ಪೂರ್ವ ಕಾಲೇಜಿನ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ ಶ್ರೀ ಅರುಣ ಕುಮಾರ್ ಆಗಮಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ದಿನೇಶ್ ಎಂ. ಕೊಡವೂರು, ಕಾರ್ಯಕ್ರಮಾಧಿಕಾರಿ ರವಿ ಜಿ., ಉಪನ್ಯಾಸಕ ಶೈಲೇಶ್ ಶೆಟ್ಟಿ ಉಪಸ್ಥಿತರಿದ್ದರು.

## "ಜವಾಬ್ದಾರಿಯುತ ಸಮಾಜಮುಖಿ ವೈದ್ಯರಾಗುತ್ತೇವೆಂದು ಪ್ರಮಾಣ ಮಾಡುತ್ತೇವೆ"



"ಎಂ.ಬಿ.ಬಿ.ಎಸ್ ಉಚಿತ ಸೀಟನ್ನು ಪಡೆದುಕೊಂಡ ನಾವು ನಾಳೆ ಹೆತ್ತ ತಂದೆ- ತಾಯಿ, ವಿದ್ಯೆ ಕಲಿಸಿದ ಸಂಸ್ಥೆ ಹಾಗೂ ನಮ್ಮನ್ನು ಸಲಹುವ ಸಮಾಜ ನಮ್ಮ ಬಗ್ಗೆ ಹೆಮ್ಮೆ ಪಡುವಂತೆ ಬದುಕುತ್ತೇವೆ. ಬಡರೋಗಿಗಳ ಸೇವೆಗೆ ಸದಾ ನೆರವಾಗುತ್ತೇವೆ. ವೃತ್ತಿ ಗೌರವವನ್ನು ಎತ್ತಿ ಹಿಡಿಯುತ್ತೇವೆ" ಎಂದು ಪ್ರಮಾಣ ವಚನ ಸ್ವೀಕರಿಸುವುದರ ಮೂಲಕ ಸಂಸ್ಥಾಪಕರ ದಿನಾಚರಣೆಯನ್ನು ಸ್ಮರಣೀಯವಾಗಿಸಿದರು.

ಎಲ್ಲರ ಸಮ್ಮುಖದಲ್ಲಿ ಡಾ.ವಿಶಾಲ್ ಅವರು ಬೋಧಿಸಿದ ಪ್ರಮಾಣ ವಚನವನ್ನು, ವಿದ್ಯಾರ್ಥಿಗಳು ಸ್ವೀಕರಿಸುವುದರ ಮೂಲಕ ಜ್ಞಾನಸುಧಾದ ಆವರಣದಲ್ಲಿ ಹೊಸ ಪರಂಪರೆಯೊಂದಕ್ಕೆ ನಾಂದಿ ಹಾಡಿದರು.

## ಕನ್ನಡಮ್ಮನ ಸೇವೆಗೆ ನಿಂತ ನಿರ್ಮಲ ಮನಸ್ಸಿನ "ನಿರ್ಮಲಾ ಸುರತ್ಕಲ್"



ಬಾಲ್ಯದಲ್ಲೇ ತಾಯಿಯ ಅಗಲಿಕೆ, ಆರ್ಥಿಕವಾಗಿ ಶ್ರೀಮಂತಿಕೆಯಿದ್ದರೂ ಹೇಳುವವರಿಲ್ಲದ ಕೇಳುವವರಿಲ್ಲದ ಅನಾಥ ಸ್ಥಿತಿ, ಊಟ , ತಿಂಡಿ, ಉಡುಪು ಅಗತ್ಯ ವಸ್ತುಗಳಾವುದರ ಬಗ್ಗೆ ಯಾರ ಕಾಳಜಿಯೂ ಇಲ್ಲದ ಬದುಕು ವರ್ತಮಾನದ ಅಭದ್ರತೆಯ ಪ್ರೀತಿರಾಹಿತ್ಯದ ನಿರ್ಜೀವ ವಾತಾವರಣದಲ್ಲಿ ಗಿಡವಾಗದೇನೇ ಮರವಾದರು. ತಂದೆ ಎಂದರೆ ಭಯ ಮಾತ್ರ, ರಕ್ತ ಸಂಬಂಧಕ್ಕೆ ಅರ್ಥವೇ ಇಲ್ಲ. ಇಂತಹ ಉಸಿರುಗಟ್ಟಿಸುವ ವಾತಾವರಣದಲ್ಲಿ ಬೆಳೆದಿರುವುದರಿಂದ ಹತ್ತನೇ ತರಗತಿಯ ನಂತರ ಓದುವ ಅವಕಾಶ ಇಲ್ಲದಾಯಿತು. ಇವರು ಬೇರಾರು ಅಲ್ಲ, ನಮ್ಮ ಜ್ಞಾನಸುಧಾ ಸಂಸ್ಥೆಯ ಒಬ್ಬ ಸದಸ್ಯೆ ನಿರ್ಮಲಾ ಸುರತ್ಕಲ್. 1959ನೇ ಇಸವಿ ಮೇ 29 ರಂದು ಪುತ್ತೂರು ತಾಲೂಕಿನ ನಿಡ್ಪಳ್ಳಿ ಗ್ರಾಮದಲ್ಲಿ ಶ್ರೀಧರ್ ನಾಯಕ್ ಹಾಗೂ ಇಂದಿರಾ ದಂಪತಿಯ ಸುಪುತ್ರಿಯಾಗಿ ಜನಿಸಿದ ಇವರು ಮುಂಡೂರಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹಾಗೂ ಬೆಟ್ಟಂಪಾಡಿ ಬಿಲ್ವಗಿರಿಯ ನವೋದಯ ಪ್ರೌಢಶಾಲೆಯಲ್ಲಿ ಶಿಕ್ಷಣವನ್ನು ಮುಗಿಸಿದರು.

ಬದುಕಿನ ಬಂಡಿಯನ್ನು ಸಾಗಿಸಲು ಟೆಲಿಫೋನ್ ಬೂತ್, ಅಡಿಕೆ ಫ್ಯಾಕ್ಟರಿ, ಟ್ರಾನ್ಸಪೋರ್ಟ್ ಕಂಪೆನಿ, ಆಶ್ರಮ, ವಿವಿಧ ಕಾಲೇಜುಗಳಲ್ಲಿ ನಿಲಯಪಾಲಕಿಯಾಗಿ ಪ್ರಸ್ತುತ ನಮ್ಮ ಈ ಶಿಕ್ಷಣ ಸಂಸ್ಥೆಯಲ್ಲಿ ನಿಲಯಪಾಲಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಷ್ಟದ ಜೀವನಾನುಭವವೇ ಇವರನ್ನು ಬರಹಗಾರ್ತಿಯನ್ನಾಗಿ ರೂಪುಗೊಳಿಸಿತು. ತೋಚಿದ್ದನ್ನೆಲ್ಲಾ ಗೀಚುವ ಹವ್ಯಾಸ, ಮನಸ್ಸಿಗನಿಸಿದ್ದನ್ನೆಲ್ಲಾ ಸುಂದರ ಬರಹವನ್ನಾಗಿ ಬದಲಾಯಿಸುವ ಕಲೆ ಕರಗತವಾಯಿತು.

ನಾನು ಪ್ರೀತಿಸುತ್ತೇನೆ, ಪಾತರಗಿತ್ತಿ ಪಕ್ಕಾ, ಅ ಆ ಇ ಈ ಉ ಊ ಈ ಮೂರು ಕವನ ಸಂಕಲನಗಳು. ತಿರುಚಬೇಡಿ ಮನಸುಗಳ, ಎಂಬ ಗದ್ಯಪ್ರತಿ ಮಕ್ಕಳ ಬಗೆಗಿನ ಪ್ರಕಟಣೆಗೊಂಡು ಎಲ್ಲೆಡೆ ತನ್ನ ಕಂಪನ್ನು ಬೀರುತ್ತಿದೆ. ನಾನು ಪ್ರೀತಿಸುತ್ತೇನೆ ಎಂಬ ಕವನ ಸಂಕಲನದ ಒಂದು ಕವನ ಹತ್ತನೆಯ ತರಗತಿಯ ವಿದ್ಯಾರ್ಥಿಗಳ ಪಠ್ಯದಲ್ಲಿ ಪ್ರಕಟಣೆಗೊಂಡಿರುವುದು ಇನ್ನೊಂದು ವಿಶೇಷ. ಚಿಯಾಂ ಚಿಯಾಂ ಚಿಕ್ಕ ಗುಬ್ಬಿ, ಪುಟ್ಟ ಪುಟ್ಟಿ ಗುಟ್ಟಾಗಿ, ಸಕ್ರೆ ಮೂಟೆ ಯಾರಿಗ್ಬೇಕು ಕವನ ಸಂಕಲನಗಳು, ಶ್ರಮಯೇವ ಜಯತೇ ಎಂಬ ಮಕ್ಕಳ ಕಾದಂಬರಿ ಪ್ರಕಟಣೆಯ ಹಾದಿಯಲ್ಲಿವೆ.

2001ರಲ್ಲಿ ಇವರ ಬಗ್ಗೆ ತಿಳಿದುಕೊಂಡ ದೇವಿ ಗಾಯತ್ರಿಯ ಉಪಸಕರಾದ ಹರಿಕೃಷ್ಣ ಭಟ್ಟರ ಸಹಾಯದಿಂದ ಎರಡು ಕೃತಿಗಳು ಬೆಳಕಿಗೆ ಬಂತು. ಈ ಮೂಲಕ ಸಂಪರ್ಕಕ್ಕೆ ಬಂದ ಹಲವಾರು ಬರಹಗಾರ ಬಂಧುಗಳ ಪ್ರೋತ್ಸಾಹ ಆಪ್ತತೆಗಳಿಂದ ಬರಹಗಾರಿಕೆಯಲ್ಲಿ ಬದುಕಿನ ಬದಲಾವಣೆ ಸಾದ್ಯವಾಯಿತು. ಮಾನವೀಯತೆ ತುಂಬಿದ ಹೃದಯಗಳು ಇವರ ಬದುಕಿನ ದಾರಿದ್ರ್ಯದ ಸ್ಥಿತಿಯನ್ನು ಮರೆಯುವಂತೆ ಮಾಡಿದೆ. ಆ ಸುಖಕ್ಕೆ ಕಾರಣರಾದವರಲ್ಲಿ ಜ್ಞಾನಸುಧಾ ಕೂಡ ಒಂದು ಎಂಬುದು ಹೆಮ್ಮೆಯ ಸಂಗತಿ.

ಸಾಧನೆಯ ಹಾದಿಯಲ್ಲಿನ ಕಷ್ಟಗಳನ್ನು ಅರಿತ ಬೋಳಂತಕೋಡಿ ಈಶ್ವರ ಭಟ್ಟರ ಸ್ಮರಣೆಗಾಗಿ ಅವರ ಅಭಿಮಾನಿ ಬಳಗ ಸ್ಥಾಪಿಸಿರುವ "ಬೋಳಂತಕೋಡಿ ಪ್ರಶಸ್ತಿ"ಗಾಗಿ 2016ರಲ್ಲಿ ಇವರನ್ನು ಆರಿಸಿ ಪ್ರಶಸ್ತಿಯನ್ನಿತ್ತು ಗೌರವಿಸಲಾಗಿದೆ.

ಬರವಣಿಗೆಯೇ ತನ್ನ ಉಸಿರಾಗಿಸಿಕೊಂಡು ಜೀವನ ಪಥದಲ್ಲಿ ಬಂದ ಕಷ್ಟಗಳನ್ನೆಲ್ಲಾ ಎದುರಿಸಿ ಮದುವೆ ಎಂಬ ಮೂರಕ್ಷರದಿಂದ ದೂರ ಸರಿದು ಎಲೆಮರೆಯ ಕಾಯಿಯಂತಿರುವ ನಿಮಗಿದೋ ಜ್ಞಾನಸುಧಾ ಪರಿವಾರದ ಅಭಿನಂದನೆಗಳು . ನಿಮ್ಮ ಈ ಬರವಣಿಗೆ ಸುಧೆಯ ಸವಿಯನ್ನು ಉಣಬಡಿಸಲಿ.

## "ಎನ್. ಜಿ. ಕನೆಕ್ಟ್"ನಲ್ಲಿ ಜ್ಞಾನಸುಧಾದ ಸಾಧನೆ



ರಾಹುಲ್ ಪ್ರಭು



ಆರ್. ಅಜಿತ್ ಕುಮಾರ್



ಸಂಕೇತ್ ಎಲ್.ಬಿ.

ಎನ್.ಐ.ಟಿ.ಕೆ ಸುರತ್ಕಲ್ ಇಲ್ಲಿ ನಡೆದ ಅಂತರ ಜಿಲ್ಲಾ ವಿಜ್ಞಾನ ಮಾದರಿ ವರ್ಕಿಂಗ್ ಮಾಡೆಲ್ ತಯಾರಿ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನಗಳಿಸಿದ ಕಾರ್ಕಳ ಜ್ಞಾನಸುಧಾ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳಾದ ರಾಹುಲ್ ಪ್ರಭು, ಆರ್. ಅಜಿತ್ ಕುಮಾರ್ , ಸಂಕೇತ್ ಎಲ್.ಬಿ.

# ROBOT V/s LABOR

"Gifts of god and science are innumerable and endless". if god had made men, Science has made his life meaningful. One cannot deny the fact that science has enabled man to make so much progress and made the society, Nation and the world advance tremendously. The knowledge which we get from science and scientific technologies speaks volumes about man's ingenuity and skill. If it were not for science even today man would have been the old animal of the jungle as he was in the past ages.

Science involves many discoveries and inventions. One such invention is the 'ROBOT'. Robot had been designed to help man in his daily chores. It can do thing more quickly and more efficiently than human beings. Robots in the present are more advanced than the robots in the past. The development of technology has made the robots to expand their horizons to the medical, military and other fields. The main reason for invention of the robots is to do things which man can't do or not willing to do. Anything, almost anything we build, to do something for our betterment or help is basically considered a robot. Most famous robots have reached the places like outer space and discovered many things.

The fields in which robots are used or can be used in the future are;

1) Medical fields; to assist the doctor.
2) In the car production.
3) Exploration of outer space
4) Under water exploration
5) Cleaning ducts
6) Identifying the substances which are hazardous to the environment.
7) Detecting oil supas.
8) Fighting against crime.

If I will continue listing there are many uses of robots. Robots have become very significant today. But we cannot forget that "man is still the most complex and significant "computer" of all, there is no match for man's labour after all it is man's labor that has created the robot. There are still many things that man can do and the robot cant. "Work is not man's punishment; it is his reward, his strength and his pleasure". And when this is the condition if the robots take away his job it also takes away his pleasure and strength.

The problem of unemployment is drastically increasing today. If we give a thought to the brain, we can observe that these problems have started after introduction of machineries. All the work has been done by the machines, so there is no job left for humans. If this is the case now, after some years when robots will be capable of doing almost all the things, the condition of man cannot be imagined. We cannot forget that "Technology is the beautiful servant but the worst master".

Today we humans have been greatly influenced by robots. There is also a saying that "In the past the danger was that the man had become slaves, the danger of the future is that he may become a robot". I am trying to state that instead of living our own life style we the people are interested to behave like robots. For example even before the robots have learned to dance properly like humans we are practising to dance like robots. This thought made me wonder of our future.

Man may be illusioned for a while that robot lessens his burdens but in the end he will realize that his life has become meaningless by depending too much on the robots. Without labor nothing prospers. We are aware that "Success is the moment when we enjoy the fruits of our labor" and now in our case if there is no labour at all how can a man enjoy success? "Change is inevitable" but it is in our hands that whether the change is good or bad.

Let's all try to be like LIONS who want not ONLY to eat but is willing to HUNT.

Anushri.D.Poojary, X B

# IMPORTANCE OF EDUCATION

Education is very important to any human kind. Man is very different from animal as he is having the rationalization. In ancient days education system was in the form of "Gurukula" system. Guru was the supreme power. But now education system has completely changed.

"Education helps mankind as a friend, philosopher and a guide. Education builds character of the students. If wealth is lost something is lost, but if character is lost everything is lost. Education is like a flame of light. It can show the way to succeed in life. The speech is also a form of education. Students can express their ideas orally and involve themselves in building the society. Education plays a major role in shaping the personality of the students. It makes us more human, more loving, more giving and more living.

Let us be educated in all the aspects and contribute to the country as the healthy human resource.

Pragathi S Nayak, IX A

## ಆಶಾವಾದ

ಮಾತಿನ ವಿನಹ
ಮೌನದ ಸನಿಹ
ಬದುಕು ಹಿತವೆನಿಸದೆ?
ನಿನ್ನೆಯ ಹಂಗಲಿ
ಕಳೆದಿಹ ಇಂದು
ನಾಳೆ ಹದವಾಗದೆ?

ನಾಳೆಯ ಗುಂಗಲಿ
ಇಂದಿನ ಸಂಜೆಗೆ
ಮೆಲ್ಲನೆ ರಂಗೇರಿದೆ.
ಕನಸಿನ ಗೂಡಲಿ
ಹಚ್ಚಿಟ್ಟ ಹಣತೆ
ಕತ್ತಲ ಬಚ್ಚಿಟ್ಟಿದೆ.

ತೊದಲದ ಮಾತಿಗೆ
ಕದಲದೆ ಮೌನ
ಬಂಧ ಬೆಸೆದಾಗಿದೆ.
ರಾಗಕೂ ಭಾವಕೂ
ತೀರದ ನಂಟು
ಬದುಕು ಕನವರಿಸಿದೆ...

ಶ್ರೀಮತಿ ಸಂಗೀತಾ
ಆಂಗ್ಲ ಭಾಷಾ ಉಪನ್ಯಾಸಕಿ

## ಸುಭಾಷಿತ

ದ್ರಾಕ್ಷಾ ಮ್ಲಾನಮುಖೀ ಜಾತಾ ಶರ್ಕರಾ ಚಾಶ್ಮತಾಂ ಗತಾ।
ಸುಭಾಷಿತ ರಸಸ್ಯಾಗ್ರೇ ಸುಧಾ ಭೀತಾ ದಿವಂ ಗತಾ॥

ಸುಭಾಷಿತದ ರುಚಿಯ ಮುಂದೆ ದ್ರಾಕ್ಷಿಯು ಬಾಡಿತು. ಸಕ್ಕರೆ ಕಲ್ಲಾಯಿತು. ಅಮೃತವು ಹೆದರಿ ಸ್ವರ್ಗಕ್ಕೆ ಹೊರಟುಹೋಯಿತು!

ಭಾಷಾಸು ಮುಖ್ಯಾ ಮಧುರಾ ದಿವ್ಯಾ ಗೀರ್ವಾಣಭಾರತೀ।
ತಸ್ಮಾದ್ಧಿ ಕಾವ್ಯಂ ಮಧುರಂ ತಸ್ಮಾದಪಿ ಸುಭಾಷಿತಂ॥

ಭಾಷೆಗಳಲ್ಲಿ ಮುಖ್ಯವೂ ಮಧುರವೂ ದಿವ್ಯವೂ ಆದುದು ಸಂಸ್ಕೃತ ಭಾಷೆ.ಅದರಿಂದ ಆ ಭಾಷೆಯ ಕಾವ್ಯ ಮಧುರ. ಅದಕ್ಕಿಂತಲೂ ಸುಭಾಷಿತ ಮಧುರ.

ದಾನಂ ಭೋಗೋ ನಾಶಸ್ತಿಸ್ರೋ ಗತಯೋ ಭವಂತಿ ವಿತ್ತಸ್ಯ।
ಯೋ ನ ದದಾತಿ ನ ಭುಂಕ್ತೇ ತಸ್ಯ ತೃತೀಯ ಗತಿರ್ಭವತಿ॥

ದಾನ, ಭೋಗ, ನಾಶ ಎಂದು ಹಣಕ್ಕಿರುವ ಗತಿಗಳು ಮೂರು.ಯಾವನು ದಾನ ಮಾಡುವುದಿಲ್ಲವೋ, ತಾನೂ ಭೋಗಿಸುವುದಿಲ್ಲವೋ ಅವನ ಹಣಕ್ಕೆ ಮೂರನೆಯ ಗತಿ, ಅಂದರೆ ನಾಶವುಂಟಾಗುತ್ತದೆ.

ಶ್ರೀಮತಿ ಜ್ಯೋತ್ಸ್ನಾ ಗಜಾನನ ಸಾರೆ
ಸಂಸ್ಕೃತ ಉಪನ್ಯಾಸಕಿ



Prasadini,10th B



Anuj,10th A

# SPORTS ACHIEVEMENTS


**Kavya Pai** of 10th standard has won Taluk and District level Chess Competition and got selected for State level in the Academic year 2016-


**Anudeepa** of 9th standard got second place in District level Shot put conducted by Udupi District Amateur Athletics Association MIT College Manipal.


**Anjan M** of 10th standard won Second place in Taluk level Triple jump competition and selected for District level competition.


**Rithesh Poojary** of 10th standard secured Third place in Taluk level High jump

# ಕರ್ನಾಟಕದ ಜನಪದ ಕಲೆಗಳು

ಮಣ್ಣಿನ ಮಕ್ಕಳ ಬಾಳಿನುಸಿರು "ಜನಪದ". ಅನಾದಿಕಾಲದಿಂದಲೂ ಹರಿದುಬಂದಿರುವ ಬದುಕಿನ ಬತ್ತದಿರುವ ಸಾಂಸ್ಕೃತಿಕ ನದಿ. ಜನರ ನಡೆ, ನುಡಿ, ಸುಖ ಸಂತೋಷಗಳಿಗೆ ನೀರೆರೆದು ಪೋಷಿಸಿದ್ದು ಇದೇ ಜನಪದ. ಸರ್ವ ಕಲೆಗಳ ಅಡಿಪಾಯ ಈ ಜನಪದ. ಆಧುನಿಕ ಮಾನವನಲ್ಲಿ ಆದಿ ಮಾನವತನ ಗುಪ್ತವಾಗಿರುವಂತೆ ಆಧುನಿಕ ಕಲೆ ವಿಜ್ಞಾನ ತಂತ್ರಜ್ಞಾನಗಳಿಗೆ ಜನಪದವೇ ಸುಪ್ತವಾಗಿರುವ ಚೈತನ್ಯವಾಗಿದೆ.

ಜನಪದ ಕಲೆಗಳಲ್ಲಿ ದೇವತಾರಾಧನೆಗೆಂದು ಹುಟ್ಟಿದವು ಕೆಲವು. ಹಲವು ನಿತ್ಯಜೀವನದ ಶ್ರಮ ನಿವಾರಣೆಗೆ ಹುಟ್ಟಿಬಂದವು. ಮತ್ತೆ ಕೆಲವು ಮನರಂಜನೆಯ ಸಲುವಾಗಿ ಬಂದವು. ಇನ್ನೂ ಕೆಲವು ಉಪಜೀವನದ ದಾರಿಯನ್ನು ರೂಢಿಸಿಕೊಂಡು ಬಂದವುಗಳಾಗಿವೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಅನೇಕ ರೀತಿಯ ಜಾನಪದ ಕಲೆಗಳಿವೆ. ಇವು ಬಯಲುಸೀಮೆ, ಮಲೆನಾಡು,ಕರಾವಳಿ ಪ್ರದೇಶಗಳಲ್ಲಿ ಹಂಚಿ ಹೋಗಿವೆ. ಡೊಳ್ಳು ಕುಣಿತ, ಗೀಗೀ ಮೇಳ, ಮರಗಾಲು ಕುಣಿತ, ವೀರಗಾಸೆ, ಯಕ್ಷಗಾನ, ದೊಡ್ಡಾಟ, ಸಣ್ಣಾಟ, ಕಂಸಾಲೆ, ಸೋಮನ ಕುಣಿತ, ಕಂಗೀಲು ಕುಣಿತ, ಚೆನ್ನು ಕುಣಿತ, ಕರಡಿ ಮಜಲು, ಹುಲಿ ವೇಷ ಮುಂತಾದ ಜನಪದ ನೃತ್ಯಗಳನ್ನು ನಾವು ಕಾಣಬಹುದು.

**ವೀರಗಾಸೆ**-ಇದು ಸಾಮೂಹಿಕ ನೃತ್ಯವನ್ನೊಳಗೊಂಡ ಒಂದು ಜಾನಪದ ನೃತ್ಯ. ಶೈವ ಸಂಪ್ರದಾಯದವರ ಧಾರ್ಮಿಕ ವೀರನೃತ್ಯ . ಇದನ್ನು ನಾವು ಶಿವಮೊಗ್ಗ, ಬಳ್ಳಾರಿ, ಚಿತ್ರದುರ್ಗ,ಚಿಕ್ಕಮಗಳೂರು ಮುಂತಾದ ಜಿಲ್ಲೆಗಳಲ್ಲಿ ಕಾಣಬಹುದು.

**ಡೊಳ್ಳು ಕುಣಿತ** - ಗಂಡು ಕಲೆ ಎನಿಸಿರುವ ಡೊಳ್ಳುಕುಣಿತ ಪುರುಷರಿಗೆ ಮೀಸಲಾದ ಕಲೆ. ಒಳ್ಳೆಯ ಮೈಕಟ್ಟು ಮತ್ತು ಶಕ್ತಿಯುಳ್ಳ ಕಲಾವಿದರಿಗೆ ಪ್ರದರ್ಶನ ಮಾಡಲಾಗುವ ಕಲೆ. ಇದನ್ನು ನಾವು ಶಿವಮೊಗ್ಗ, ಬಳ್ಳಾರಿ ಮುಂತಾದ ಜಿಲ್ಲೆಗಳಲ್ಲಿ ಕಾಣಬಹುದು.

**ಯಕ್ಷಗಾನ** - ಇದು ಮಾತುಗಾರಿಕೆ, ಹಾಡುಗಾರಿಕೆ, ಅಭಿನಯ, ವೇಷ ಭೂಷಣವನ್ನೊಳಗೊಂಡ ಒಂದು ಸ್ವತಂತ್ರವಾದ ಶಾಸ್ತ್ರೀಯ ಕಲೆ. ಇದು ಹೆಚ್ಚಾಗಿ ಕರಾವಳಿ ಜಿಲ್ಲೆಗಳಾದ ಉಡುಪಿ, ಉತ್ತರಕನ್ನಡ ಮತ್ತು ದಕ್ಷಿಣ ಕನ್ನಡ, ಕಾಸರಗೋಡು ಜಿಲ್ಲೆಗಳಲ್ಲಿ ಮನೆಮಾತಗಿದೆ. ಉತ್ತರಕನ್ನಡದಲ್ಲಿ ಯಕ್ಷಗಾನದ ಎರಡು ಪ್ರಕಾರಗಳಲ್ಲಿ ಒಂದಾದ ಬಡಗುತಿಟ್ಟನ್ನು ಕಾಣಬಹುದು. ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ತೆಂಕುತಿಟ್ಟು ಎಂದು ಗುರುತಿಸಿಕೊಂಡಿದೆ. ಎರಡು ಪ್ರಕಾರಗಳ ವೇಷಭೂಷಣ, ಮಾತುಗಾರಿಕೆ, ಭಾಗವತಿಕೆ ಬೇರೆ ಬೇರೆಯಾಗಿದೆ.

**ಕಂಸಾಳೆ** - ಮಲೆಮಹಾದೇಶ್ವರನ ಭಕ್ತರಾದ ದೇವರಗುಡ್ಡರು ಉಪಯೋಗಿಸುವ ಒಂದು ವಿಶಿಷ್ಟವಾದ ವಾದ್ಯ. ಮಹಾದೇಶ್ವರನ ಕಾವ್ಯಗಳನ್ನು ಹೇಳುತ್ತಾ ಮತ್ತು ಕಂಸಾಳೆಯನ್ನು ಬೀಸುತ್ತಾ ಪ್ರದರ್ಶಿಸುತ್ತಾರೆ.
ಇದಕ್ಕೆ ಬೀಸು ಕಂಸಾಳೆ ಎಂಬ ಇನ್ನೊಂದು ಹೆಸರು ಇದೆ. ಇದನ್ನು ಹೆಚ್ಚಾಗಿ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಕಾಣಬಹುದು.

**ಕಂಗೀಲು ಕುಣಿತ** - ಮಾರಿಯನ್ನು ಓಡಿಸುವ ಆಶಯದಿಂದಾಗಿ ಇದನ್ನು ಪ್ರದರ್ಶಿಸುತ್ತಾರೆ. ಇದನ್ನು ತುಳುನಾಡಿನಲ್ಲಿರುವ ಮುಂಡಾಲ ಜನಾಂಗ ಮತ್ತು ಗೊಡ್ಡ ಜನಾಂಗದವರು ಪ್ರದರ್ಶಿಸುತ್ತಾರೆ. ಹೀಗೆ ಬರೆಯತೊಡಗಿದರೆ ಮುಗಿಸಲು ಸಾಧ್ಯವಿಲ್ಲ. ನಮ್ಮಲ್ಲಿ ಒಂದಲ್ಲ ಎರಡಲ್ಲ ನೂರಾರು ಜನಪದ ಕಲೆಗಳಿವೆ. ಆದರೆ ಇತ್ತೀಚಿನ ದಿನಗಳಲ್ಲಿ ಆಧುನಿಕತೆಯ ಸೌಲಭ್ಯ, ಸುಲಭ ಸೌಕರ್ಯಗಳಿಂದಾಗಿ ನಮ್ಮ ಜೀವನದ ರೀತಿ ಬದಲಾಗಿದೆ. ಆದ್ದರಿಂದ ಈ ಜನಪದ ಕಲೆಗಳನ್ನು ಉಳಿಸುವ, ಬೆಳೆಸುವ ಜವಾಬ್ದಾರಿ ನಮ್ಮ ಮೇಲಿದೆ.

ಕಾವ್ಯ ಭಟ್ - ಹತ್ತನೇಯ ತರಗತಿ 'ಬಿ' ವಿಭಾಗ


Swaroop Shetty
10th A

# ಭೂಮಿಯ ಮೇಲೆ ರೈತನೇ ಇಲ್ಲದಿದ್ದರೆ?



'ಎಲ್ಲಾ ಕೆಲಸಗಳಿಗೂ ಅದರದ್ದೇ ಅದ ಮಹತ್ವವಿರುತ್ತದೆ. ಅದರೆ ಜನರು ಇಂಜಿನಿಯರ್,ಡಾಕ್ಟರ್ ವೃತ್ತಿ ಮಾತ್ರ ಕೆಲಸವೆಂದು ತಿಳಿದಿರುವರು. ಎಲ್ಲರಿಗೂ ಗೊತ್ತಿದೆ,ಜಗತ್ತಿನಲ್ಲಿ ರೈತನ ಕೆಲಸ ತುಂಬಾ ಕಷ್ಟವಾದದ್ದು. ಬೆಳೆಯನ್ನು ಬೆಳೆಯಬೇಕಾದರೆ ಉತ್ತಮ ಬೀಜ, ನೆಲ ಗೊಬ್ಬರಕ್ಕಿಂತ ಮುಖ್ಯವಾಗಿ ಬೇಕಾಗಿರುವುದು ದುಡಿದು ಬೆಳೆಸುವ ಮನಸ್ಸಿರುವ ರೈತ.

ನಮ್ಮ ಭಾರತ ಕೃಷಿ ಕಸುಬಿನ ದೇಶ, ರೈತ ಈ ದೇಶದ ಬೆನ್ನೆಲುಬು ಕೈ ಕೆಸರಾದರೆ ಬಾಯಿ ಮೊಸರು ಎನ್ನುವ ಗಾದೆಯೇ ಇದೆ. ಅದರ ಅರ್ಥ ನಾವು ಕಷ್ಟಪಟ್ಟು ದುಡಿಯಬೇಕು. ಈಗಿನ ಕಾಲದ ಜನರಿಗೆ ಕಷ್ಟ ಪಟ್ಟು ದುಡಿಯುವ ಮನಸ್ಸಿಲ್ಲ. ಎಲ್ಲರಿಗೂ ಸುಖ ಪಡುವ ಆಸೆ ಇದೆ.

ಆದರೆ ಏನೂ ತಿನ್ನದೆ ಹೊಟ್ಟೆ ತುಂಬುವುದಿಲ್ಲ, ಹಸಿವು ನಿಲ್ಲುವುದಿಲ್ಲ ಹೊತ್ತು ಹೊತ್ತಿಗೆ ನಮಗೆ ಹಸಿವಾದಾಗ ತಿನ್ನಲು ಹಣ್ಣು, ತರಕಾರಿ,ಧವಸ ಧಾನ್ಯಗಳು ಭೇಕು.ರೈತರು ಹಗಲೆನ್ನದೆ, ರಾತ್ರಿಎನ್ನದೆ, ಬಿಸಿಲೆನ್ನದೆ, ಮಳೆಯನ್ನದೆ ಹೊಲದಲ್ಲಿ ದುಡಿದು ಕೃಷಿಯನ್ನು ಮಾಡುತ್ತಾರೆ. ಕೃಷಿಯನ್ನು ಮಾಡಲು ಗೊಬ್ಬರ ಬೇಕು. ಹಾಗಾಗಿ ಹಸುಗಳು ರೈತನ ಸಂಗಾತಿಯಾಗಿರುತ್ತಾರೆ. ಬೆಳೆ ಬೆಳೆಯಲು ನೀರು ಬೇಕು. ನೀರಿಗಾಗಿ ಕೆರೆ ನದಿಗಳು ಬತ್ತದಂತೆ ನೋಡಿಕೊಳ್ಳಬೇಕು, ಮಳೆ ಬರಲು ಕಾಡು ಕಡಿಯದೆ ಪರಿಸರವನ್ನು ಸ್ವಚ್ಛವಾಗಿಡಬೇಕು. ಇದನ್ನೆಲ್ಲ ಅರಿತವನು ರೈತನೊಬ್ಬನೇ "ಅಂಥ ರೈತನೇ ಇಲ್ಲದಿದ್ದರೆ ಈ ಭೂಮಿಯು ಜನರಿಲ್ಲದ ಬರಡು ನೆಲವಾದೀತು."

ಸಚೀನ್ ಜೆ.ಎಸ್., ಹರೀಶ್ ಟಿ.ಪಿ., 15PCMB

# GIRL CHILD IS NOT A BURDEN

A girl is a reflection of Godess. Mother earth is considered to be a woman. There is a blind belief that girl is a burden to the family. Its a superstitious belief. A girl bears responsibility of whole family. She should be given importance. She helps a family in every work

